

ನನ್ನನ್ನು ನೋಡಿ ಆತ, ಕುರ್ಚಿಗೆ ಉದ್ದಕ್ಕೂ ನೀಳವಾಗಿ ದೇಹವನ್ನು ಹಿಂದಕ್ಕೆ ಒರಗಿಸಿದ. ಕೊರಳನ್ನು ಆವರಿಸುವಂತೆ ಆತನಿಗೆ ಬಟ್ಟೆಯನ್ನು ಹೊದಿಸಬೇಕಿತ್ತು. ಆತನನ್ನು ನೋಡಿದ ಮರುಕ್ಷಣದಿಂದಲೇ ನಾನು ಅಸಹನೆಯ ಮಡುವಿನಲ್ಲಿ ಮುಳುಗಿದ್ದೆ ಎಂಬುದಂತೂ ನಿಜ. ಮೇಜಿನ ಕೆಳಡ್ರಾಯರಿನಲ್ಲಿ ಮಡಚಿಟ್ಟಿದ್ದ ಬಟ್ಟೆಯನ್ನು ಹೊರತೆಗೆದು, ನನ್ನ ಗಿರಾಕಿಯ ಕೊರಳಿನ ಸುತ್ತಲೂ ಹೊದಿಸಿದೆ. ಆತನ ಮಾತುಗಳಿನ್ನೂ ನಿಂತಿರಲಿಲ್ಲ. ಬಹುಶಃ ನಾನು ಆತನ ಪಕ್ಷದ ಬೆಂಬಲಿಗನೆಂದು ಭಾವಿಸಿದ್ದನೇನೋ?

'ಅವತ್ತು ನಾವು ನಡೆಸಿದ ಕಾರ್ಯಾಚರಣೆಯಿಂದ ಈ ಇಡೀ ಪಟ್ಟಣ ಪಾಠ ಕಲಿತಿರಲಿಕ್ಕೆ ಸಾಕು' ಎಂದು ಆತ ನನ್ನತ್ತ ನೋಡದೇ ಹೇಳಿದ.

'ಹೌದು'- ಆತನ ಮೃದುವಾದ ಕೊರಳ ಮೇಲೆ ಬಟ್ಟೆಯನ್ನು ಹೊದಿಸಿ ಒತ್ತುತ್ತ, ಸರಿಯಾಗಿ ಅದನ್ನು ಕೂರಿಸುತ್ತ ಹೇಳಿದೆ.

'ಆ ಕಾರ್ಯಾಚರಣೆ ನಿಜವಾಗಿಯೂ ಅದ್ಭುತವಾಗಿತ್ತು. ಅಲ್ಲವೇ?'

'ಅತ್ಯದ್ಭುತ!' -ಬ್ರಶ್ಶನ್ನು ಬಟ್ಟಲಿನಲ್ಲಿ ಮತ್ತೆ ಮತ್ತೆ ತಿರುಗಿಸುತ್ತ ಉತ್ತರಿಸಿದೆ. ತೀರಾ ದಣಿದಂತೆ ಕಾಣುತ್ತಿದ್ದ ಆತ, ಇನ್ನೇನು ನಾನು ಹಚ್ಚಲಿರುವ ತಣ್ಣನೆಯ ನೊರೆಗೆ ಕಾಯುತ್ತ ಕಣ್ಣುಗಳನ್ನು ಮುಚ್ಚಿಕೊಂಡ.

ಇಷ್ಟು ಹತ್ತಿರದಿಂದ ಆತನನ್ನು ನಾನು ಯಾವತ್ತೂ ನೋಡಿರಲೇ ಇಲ್ಲ. ಸೆರೆಸಿಕ್ಕ ನಾಲ್ವರು ಬಂಡುಕೋರರನ್ನು ಶಾಲೆಯ ಆವರಣದಲ್ಲಿ ನೇಣು ಹಾಕುವ ಘಟನೆ ನೋಡಲು ಇಡೀ ಪಟ್ಟಣದ ಜನರೆಲ್ಲ ಹೋಗಿದ್ದಾಗ, ನಾನೂ ಅಲ್ಲಿದ್ದು ಈತನನ್ನು ಮೊತ್ತಮೊದಲ ಬಾರಿಗೆ ಕಂಡಿದ್ದೆ. ಹಿಡಿ ಉಸಿರಿಗಾಗಿ